# ಮೈಸೂರು ಕಾಂಗ್ರೆಸ್‌ನಲ್ಲಿ ಕಡಿದಾಳ್ ಮಂಜಪ್ಪನವರ ಪಾತ್ರ

**ಪ್ರವೀಣ್ ಎಸ್.**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಸಿ.ಜಿ. ಬೆಲ್ಲದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಕ್ಕಿಆಲೂರು.

DOI: https://doi.org/10.5281/zenodo.17411623

## ABSTRACT:

ಕಡಿದಾಳ್ ಮಂಜಪ್ಪನವರು 'ಮೈಸೂರಿನ ಗಾಂಧಿ' ಎಂದು ಪ್ರಸಿದ್ಧರಾಗಿದ್ದು, ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹದ ಗಾಂಧಿ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಆರಂಭದಲ್ಲಿ ಬಡತನದಲ್ಲಿದ್ದರೂ ಉನ್ನತ ಶಿಕ್ಷಣ ಪಡೆದು ವಕೀಲ ವೃತ್ತಿ ಆರಂಭಿಸಿದರು. ಅವರು ಮೈಸೂರು ಕಾಂಗ್ರೆಸ್‌ನ ಸದಸ್ಯರಾಗಿ 1937ರಲ್ಲಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್‌ನ ಮೊದಲ ಕಾರ್ಯದರ್ಶಿಯಾದರು. ಪ್ರಜಾಪಕ್ಷಗಳನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸುವ ಮೂಲಕ ಸಂಸ್ಥೆಯನ್ನು ಬಲಪಡಿಸುವಲ್ಲಿ ಹಾಗೂ ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಗಾಗಿ ನಡೆದ ಶಿವಪುರ ಸಮಾವೇಶ ಮತ್ತು ಅರಣ್ಯ ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರ ವಹಿಸಿದರು. ಶಾಸಕರಾಗಿ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದರು. ಗೇಣಿದಾರರ ಕುಟುಂಬದಿಂದ ಬಂದ ಇವರು ಗೇಣಿದಾರರ ಸಂಘ ಮತ್ತು ರೈತ ಸಂಘಗಳನ್ನು ಸ್ಥಾಪಿಸಿ, ಅಂತಿಮವಾಗಿ ಕರ್ನಾಟಕದಲ್ಲಿ ಭೂಸುಧಾರಣೆಗೆ ಅಡಿಪಾಯ ಹಾಕಿದರು. ರಾಜಕಾರಣಿಗಳು ಪ್ರಾಮಾಣಿಕರಾಗಿರಬೇಕು ಎಂದು ಪ್ರತಿಪಾದಿಸಿದ ಮಂಜಪ್ಪನವರು ಜನಸೇವೆಗಾಗಿಯೇ ತಮ್ಮ ಅಧಿಕಾರವನ್ನು ಬಳಸಿದರು.

## KEYWORDS:

ಕಡಿದಾಳ್ ಮಂಜಪ್ಪ, ಮೈಸೂರು ಕಾಂಗ್ರೆಸ್, ಭೂಸುಧಾರಣೆ, ಗಾಂಧಿವಾದ, ರೈತ ಸಂಘ.

**ಪೀಠಿಕೆ:**

ಗಾಂಧೀಜಿ ಅವರ ಆದರ್ಶಗಳನ್ನು ಮತ್ತು ಕಡಿದಾಳ್‌ರನ್ನು ಯಾವ ಕಾಲಕ್ಕೂ ಬೇರ್ಪಡಿಸಲು ಸಾಧ್ಯವಿಲ್ಲ. ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹ ಎಂಬ ಮಂತ್ರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಗಾಂಧಿಮಾರ್ಗದಲ್ಲಿಯೇ ನಡೆದು ಸಮಾಜಕ್ಕೆ ಅಂಟಿದ ದಾಸ್ಯ ಸಂಕೋಲೆಗಳನ್ನು ಕಿತ್ತೊಗೆಯಲು ಅವರು ಪ್ರಯತ್ನ ಪಟ್ಟಿರುವುದನ್ನು ಗಮನಿಸಬಹುದು. ಗಾಂಧೀಜಿಯ ಆದರ್ಶತತ್ವಗಳ ಮಾದರಿಯಲ್ಲಿಯೇ ಜೀವನ ಸಾಗಿಸಿದ ಕಡಿದಾಳ್‌ರನ್ನು 'ಮೈಸೂರಿನ ಗಾಂಧಿ' ಎಂದು ಕರೆದಿರುವುದು ಸೂಕ್ತವಾಗಿದೆ, ಜನಪರ ಹೋರಾಟಗಾರರಾಗಿ ಮುಂಚೂಣಿಯಲ್ಲಿರುವವರು ಅನುಭವಿಸಿದ ಸಂಕಷ್ಟಗಳದ್ದೇ ಒಂದು ಇತಿಹಾಸವಿದೆ. ಏಕೆಂದರೆ ಜನಪರವಾದ ಕೆಲಸಗಳನ್ನು ಪ್ರಶ್ನಿಸುವವರ ಸಂಖ್ಯೆಯೇ ಇತಿಹಾಸದುದ್ದಕ್ಕೂ ಕಂಡುಬಂದಿದೆ. ಕಡಿದಾಳ್‌ರ ಅಧಿಕಾರಾವಧಿಯಲ್ಲಿ ಕೂಡ ಅವರು ಹಲವಾರು ಸಮಸ್ಯೆ ಸವಾಲುಗಳನ್ನು ಎದುರಿಸುತ್ತಲೇ ಬಂದಿರುವುದು ಕಂಡುಬಂದಿದೆ. ಈ ಸಮಸ್ಯೆಯ ಜೊತೆಯಲ್ಲಿಯೇ ಸುಧಾರಣಾ ಕಾರ್ಯ ಕೈಗೊಂಡು ಭೂಸುಧಾರಣೆಯ ರುವಾರಿಯೆನಿಸಿಕೊಂಡಿದ್ದಾರೆ. ಕಡಿದಾಳ್‌ರು ಸಾಮಾನ್ಯರ ಜೊತೆ ಸಾಮಾನ್ಯವಾಗಿಯೇ ಬೆರೆಯುತ್ತಿದ್ದರು. ಜನತೆಗೆ ಕಡಿದಾಳ್‌ರ ಮೇಲೆ ಅಭಿಮಾನವಿದ್ದರೆ, ಕಡಿದಾಳ್‌ರಿಗೆ ಜನರ ಮೇಲೆ ಪ್ರೀತಿ ಇತ್ತು. ಸೇವಾ ಭಾವನೆಯಿತ್ತು. ಇಂಥ ಪ್ರೀತಿಯು ಭೂಮಾಲೀಕರ ಮತ್ತು

ರಾಜಕೀಯ ವ್ಯಕ್ತಿಗಳ ಸವಾಲಿನ ಮುಂದೆ ಚುನಾವಣೆಯಲ್ಲಿ ಗೆದ್ದು ಬರುವಂತಾಯಿತು. ಕಡಿದಾಳ್‌ರಿಗೆ ಅಧಿಕಾರ ಜನಸೇವೆಗೊಂದು ಸಾಧನವಾಗಿತ್ತೇ ವಿನಃ ಎಂದೂ ತಮ್ಮ ಸ್ಥಾನಭದ್ರತೆಯ ಸಾಧನೆಯಾಗಿರಲಿಲ್ಲ. ಜನಸೇವೆಗಾಗಿಯೇ ಜೀವನ ತೊಡಗಿಸಿಕೊಂಡಿದ್ದ ಕಡಿದಾಳ್‌ರ ಕ್ರಿಯಾಶೀಲತೆ, ಒಲವು, ನಿಲುವುಗಳು, ಬಡವರ ಬಗೆಗಿನ ಕಾಳಜಿಗಳು, ಭೂಹೋರಾಟದ ಸಾಧನೆಗಳಿಗೆ ಬುನಾದಿಯಾದವು.

**ಪರಿಚಯ:**

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗೋಳಿಗೆ ಗ್ರಾಮ ಅಕ್ಷರ ಜಗತ್ತಿನಿಂದ ಸಂಪೂರ್ಣವಾಗಿ ವಂಚಿತವಾಗಿತ್ತು. ಇಂತಹ ಗ್ರಾಮದಲ್ಲಿ ಮಂಜಪ್ಪನವರು ಕಡಿದಾಳ್ ಎಂಬ ಮನೆತನದಲ್ಲಿ 13071907ರಲ್ಲಿ ದುಗ್ಗಣಗೌಡ ಮತ್ತು ಚೆನ್ನಮ್ಮ ಅವರ ಮೊದಲ ಮಗನಾಗಿ ಜನಿಸಿದರು. ಕಡಿದಾಳ್‌ರ ಮನೆತನವು ಶ್ರೀಮಂತಿಕೆಯ ಪರಂಪರೆಯನ್ನು ಹೊಂದಿತ್ತು. ಅವರ ಕಾಲದಲ್ಲಿ ಅವರು ಬಡತನದಲ್ಲಿಯೇ ಕಾಲನೂಕಬೇಕಾಯಿತು. ಇದಕ್ಕೆ ಕಾರಣ ಕಡಿದಾಳ್‌ರ ಅಜ್ಜ ತಮ್ಮಣ್ಣಗೌಡರು ಯಥೇಚ್ಛವಾಗಿದ್ದ ವಂಶದ ಆಸ್ತಿಯನ್ನೆಲ್ಲಾ ಅಣ್ಣನ ಸ್ವಾರ್ಥತೆ ದಬ್ಬಾಳಿಕೆಗಳನ್ನು ಸಹಿಸದೆ ಎಲ್ಲವನ್ನು ತೊರೆದು ಸ್ವಾಭಿಮಾನದ ಗೇಣಿ ಬದುಕನ್ನು ಆಯ್ದುಕೊಂಡರು. ಹೀಗಾಗಿ ಕಡಿದಾಳ್ ಅವರ ಕುಟುಂಬವು ಬಡತನದಲ್ಲಿಯೇ ಜೀವನ ಸಾಗಿಸಬೇಕಾಯಿತು.[1]

ಕಡಿದಾಳ್‌ರಿಗೆ ಇಂತಹ ಬಡತನದಲ್ಲಿಯೂ ಓದಬೇಕೆಂಬ ಕನಸು ಆ ಕನಸುಗಳನ್ನು ನನಸಾಗಿಸಿಕೊಳ್ಳುವ ದಿಕ್ಕಿನಲ್ಲಿ ಸವೆಸಿದ ದಾರಿ ಸುಗಮವಾಗಿರಲಿಲ್ಲ. ಕಡಿದಾಳ್ ಪ್ರಾಥಮಿಕ ಶಿಕ್ಷಣ ಐಗಳ ಮಠದಲ್ಲಿ ರುಕ್ಕಾಚಾರಿ ಎಂಬ ಗುರುಗಳ ಕೃಪೆಯಿಂದ ಮರಳಿನ ಮೇಲೆ ಅಕ್ಷರಾಭ್ಯಾಸದಿಂದ ಪ್ರಾರಂಭವಾಯಿತು. ಮುಂದಿನ ಶಿಕ್ಷಣ ಚಿಕ್ಕಪ್ಪ ತುಡ್ಡಿ ರಾಮಣ್ಣನಗೌಡರ ಸಹಾಯದಿಂದ ತೀರ್ಥಹಳ್ಳಿಯಲ್ಲಿ ನಡೆಯಿತು. ಕಡಿದಾಳ್‌ರು ಪ್ರೌಢಶಿಕ್ಷಣವನ್ನು ಶಿವಮೊಗ್ಗದಲ್ಲಿ ಪಡೆದರು. ಇದೇ ಸಂದರ್ಭದಲ್ಲಿ ಶಾಲಾ ಆವರಣದಲ್ಲೇ ಮೊದಲ ಬಾರಿಗೆ ಮಹಾತ್ಮ ಗಾಂಧೀಯವರನ್ನು ಕಾಣುವ ಅವಕಾಶ ಒದಗಿ ಬಂತು. ಅವರ ಭಾಷಣವನ್ನು ಕೇಳಿ ಕಡಿದಾಳ್ ಮನಸ್ಸು ಮಾರು ಹೋಯಿತು. ಅವರಿಗೆ ನಿಧಾನವಾಗಿ ಸ್ವಾತಂತ್ರ್ಯ ಚಳುವಳಿಯ ಅರ್ಥ ತಿಳಿಯತೊಡಗಿತು. ತಾನು ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಡಬೇಕೆಂದು ಅವರ ಹೃದಯ ತುಡಿಯಿತು. 'ಹರಿಜನ' 'ಯಂಗ್ ಇಂಡಿಯ' ಪತ್ರಿಕೆಗಳಿಂದ ಅವರು ಬಹಳಷ್ಟು ಪ್ರಭಾವಿತರಾದರು.[2] ಗಾಂಧೀ ಅವರು ಕಡಿದಾಳ್‌ರ ಬದುಕಿನ ಕ್ರಾಂತಿ ಪುರುಷರಾದರು. ಇಂಟರ್ ಮೀಡಿಯಟ್ ಶಿಕ್ಷಣ ಪಡೆಯಲು ಬೆಂಗಳೂರಿನಲ್ಲಿರುವ ಆರ್ಟ್ಸ್ ಆಂಡ್ ಸೈನ್ಸ್ ಕಾಲೇಜನ್ನು ಸೇರಿಕೊಂಡರು. ಮುಂದೆ ಬಿ.ಎ. ಪದವಿಯನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪಡೆದರು. ಈ ಸಂದರ್ಭದಲ್ಲಿ ರಾಮಕೃಷ್ಣ ಆಶ್ರಮದೊಂದಿಗೆ ಸಂಪರ್ಕ ಬೆಳೆಸಿಕೊಂಡರು. ಅಲ್ಲಿನ ಪ್ರಶಾಂತ ಜೀವನ ಉಪನ್ಯಾಸಗಳಿಂದ ಮತ್ತು ವಿವೇಕಾನಂದರ ತತ್ವಗಳಿಂದ ಬಹಳಷ್ಟು ಪ್ರಭಾವಿತರಾದರು. "ತಾನು ಸಹ ವಿವೇಕಾನಂದರಂತೆ ದೊಡ್ಡ ಯೋಗಿಯಾಗಿ ಜಡನಿದ್ರೆಯಲ್ಲಿರುವ ಭಾರತವನ್ನು ಎಚ್ಚರಿಸಬೇಕು"[3] ಎಂಬ ಹಂಬಲ ಉಂಟಾಯಿತು. ಇದರಿಂದಾಗಿ ರಾಷ್ಟ್ರೀಯ ಕಾಂಗ್ರೆಸ್ ಸೇರಿ ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಳ್ಳುವ ತುಡಿತ ಜೊತೆಗೆ ತಾನು ಉದ್ಯೋಗ ಪಡೆದು ತಂದೆಯ ಬಡತನದ ಭಾರವನ್ನೆಲ್ಲಾ ಹೊರಬೇಕೆಂಬ ವಾಸ್ತವಿಕ ಪ್ರಜ್ಞೆಯಿಂದ ಮನಸ್ಸು ಗೊಂದಲವಾಯಿತು.

ಈ ಹಂತದಲ್ಲಿ ಯಾವುದೇ ನಿಶ್ಚಿತ ನೆಲೆಯನ್ನು ಕಾಣದೆ ತೊಳಲಾಟವನ್ನು ಅನುಭವಿಸಿದರು. 1932ರಲ್ಲಿ ಎಲ್.ಎಲ್.ಬಿ.ಶಿಕ್ಷಣವನ್ನು ಪಡೆಯಲು ಪೂನಾದ ಕಾನೂನು ಕಾಲೇಜನ್ನು ಸೇರಿಕೊಂಡರು. ಆ ಕಾಲದಲ್ಲಿ ಪೂನಾ ಸಾಂಸ್ಕೃತಿಕ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿತ್ತು. ಇದೇ ಸಂದರ್ಭದಲ್ಲಿ ಕೋಮುವಾರು ತೀರ್ಪಿನ ವಿರುದ್ಧ ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರಿಂದ ದೇಶದಲ್ಲಿ ಉದ್ವಿಗ್ನ ಸ್ಥಿತಿ ಉಂಟಾಗಿತ್ತು. ಎಲ್ಲೆಲ್ಲೂ ಚರ್ಚೆ ಭಾಷಣಗಳು ಬಿರುಸಾಗಿ ನಡೆಯುತ್ತಿದ್ದವು. ಗಾಂಧೀಜಿಯವರ ಚಳುವಳಿಯ ಪರಿಚಯ ರಾಜಕೀಯ ಸ್ಥಿತಿಯನ್ನು ಅವಲೋಕಿಸುವ ಸಂದರ್ಭ ಒದಗಿ ಬಂದಿದ್ದರಿಂದ ಅವರ ರಾಜಕೀಯ ಪ್ರಜ್ಞೆಯ ಪರಿಧಿ ಇನ್ನಷ್ಟು ವಿಶಾಲಗೊಂಡಿತು. ಹಾಗೆಯೇ ಅನಿತಾ ಅವರ ಪ್ರಕಾರ, ಕಡಿದಾಳು ಪಡೆದುಕೊಂಡ ಉನ್ನತ ಶಿಕ್ಷಣವಾದ ಎಲ್.ಎಲ್.ಬಿ.ಪದವಿಯ ಫಲಶ್ರುತಿಯು ಒಬ್ಬ ಸಮರ್ಥ ರಾಜಕಾರಣಿ ಯಾಗಲು ಹಾಗೂ ಉತ್ತಮ ಭೂಸುಧಾರಕನಾಗಿ ರೂಪುಗೊಳ್ಳಲು ಸ್ಫೂರ್ತಿಯಾಯಿತು.[4]

**ಮೈಸೂರ್ ಕಾಂಗ್ರೆಸ್ ಮತ್ತು ಕಡಿದಾಳ್ ಮಂಜಪ್ಪ:**

ಭೂ ಸಮಸ್ಯೆಗಳನ್ನು ಪರಿಹರಿಸುವುದು ಕೇವಲ ಹೋರಾಟದಿಂದ ಮಾತ್ರ ಸಾಧ್ಯವಿಲ್ಲ ಎಂದು ಕಡಿದಾಳ್‌ರು ನಂಬಿದ್ದರು. ಆ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬೇಕಾದರೆ ಅದನ್ನು ಕಾಯಿದೆಗಳ ಮೂಲಕ ಸುಧಾರಿಸಬೇಕು ಎಂಬ ನಂಬಿಕೆಯನ್ನೇ ಇಟ್ಟವರು ಕಡಿದಾಳ್ ಮಂಜಪ್ಪ, ಈ ಕಾರಣದಿಂದಲೇ ವಕೀಲ ವೃತ್ತಿಯ ಜೊತೆಯಲ್ಲಿಯೇ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾದರು. ಕಾಂಗ್ರೆಸ್ ಪಕ್ಷವು ಪ್ರಾರಂಭದಿಂದಲೂ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಯ ಮೂಲ ಉದ್ದೇಶವನ್ನಿಟ್ಟುಕೊಂಡು ಸ್ಥಾಪಿಸಿದಂತಹ ಪಕ್ಷವಾಗಿತ್ತು. ಈ ಹಿನ್ನೆಲೆಯಲ್ಲಿ ನೋಡಿದಾಗ ಕಡಿದಾಳ್‌ರು ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡು ಸರ್ಕಾರದ ಮೂಲಕ ಸುಧಾರಣೆಯನ್ನು ತಂದಿರುವುದು ಗುರುತಿಸಬಹುದು. ರಾಷ್ಟ್ರ ನಾಯಕರು ಕಾಂಗ್ರೆಸ್ ಪಕ್ಷವನ್ನು ವೇದಿಕೆಯಾಗಿ ಬಳಸಿಕೊಂಡು ರಾಜಕೀಯದಲ್ಲಿ ಸುಧಾರಣೆ ತಂದಿದ್ದು, ಬ್ರಿಟೀಷರಿಂದ ದಾಸ್ಯ ವಿಮೋಚನೆ ಮಾಡಿರುವುದು ಕಾಂಗ್ರೆಸ್ ಪಕ್ಷದ ಮಹತ್ವದ ಸಾಧನೆಯಾಗಿದೆ. ಸಾಮಾಜಿಕ ಒಳತಿಗಾಗಿ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡು ರಾಮರಾಜ್ಯದ ಕನಸನ್ನು ಕಂಡ ಮಹಾತ್ಮ ಗಾಂಧೀಜಿಯವರು ಕಾಂಗ್ರೆಸ್ ಪಕ್ಷವನ್ನು ಬಲಪಡಿಸಿರುವುದನ್ನು ನಾವು ಗಮನಿಸಬಹುದು. ದೇಶದಾದ್ಯಂತ ತನ್ನ ತತ್ವಚಿಂತನೆಗಳಿಂದ ಜನರ ಮೇಲೆ ಪ್ರಭಾವ ಬೀರಿ ಜನರನ್ನು ಒಗ್ಗೂಡುವಂತೆ ಮಾಡಿದರು. ಕಡಿದಾಳ್‌ರು ಕೂಡ ಗಾಂಧಿವಾದವನ್ನು ಮೈಗೂಡಿಸಿಕೊಂಡು ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡೇ ಭೂಹೋರಾಟವನ್ನು ಪ್ರಾರಂಭಿಸಿರುವುದು ಗಮನಾರ್ಹವಾಗಿದೆ.[5]

ವಕೀಲ ವೃತ್ತಿಯ ಪ್ರಸಿದ್ಧತೆಯಿಂದ ಕಡಿದಾಳು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಮುಖ ವ್ಯಕ್ತಿಯಾಗಿ ಕಂಡುಬಂದರು. 1936ರಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರಾದರು. ನಂತರ 1937ರಲ್ಲಿ ಶಿವಮೊಗ್ಗ ಜಿಲ್ಲಾ ಕಾಂಗ್ರೆಸಿನ ಮೊದಲ ಕಾರ್ಯದರ್ಶಿಯಾಗಿ ನೇಮಕವಾದರು. ಇದೇ ಸಂದರ್ಭದಲ್ಲಿ ಸ್ವತಂತ್ರ ಹೋರಾಟಗಾರರಾದಂತಹ ಡಾ.ಪಾರ್ಥನಾರಾಯಣರೊಂದಿಗೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯ ಮತ್ತು ಎಸ್.ಮಲ್ಯರವರು ಪರಿಚಯವಾಗಿದ್ದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯಾಗಿದ್ದರಿಂದ ಇವರ ಮನೆಗೆ ಕಾಂಗ್ರೆಸಿನ ಪ್ರಮುಖ ವ್ಯಕ್ತಿಗಳು ಬರುತ್ತಿದ್ದು ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾದ ಹಳ್ಳಿಕೇರಿ ಗುದ್ಲೆಪ್ಪನವರು, ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಹನುಮಂತರಾವ ಮೊಹರೆಯವರು ಹಾಗೂ ಭಾರತ ಸೇವಾದಳದ

ಸಂಸ್ಥಾಪಕರಾಗಿದ್ದ ಡಾಕ್ಟರ್ ಹರ್ಡೇಕರ್ ಮಂಜಪ್ಪ, ಉತ್ತರ ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರಾದ ಸರ್ದಾರ ವೆಂಕಟರಾಮಯ್ಯರವರ ಜೊತೆ ಆಗಾಗ ಹಲವಾರು ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಹಾಗೆಯೇ ರಾಜ್ಯಪಾಲರಾದಂತಹ ಶ್ರೀ ಆರ್. ಆರ್.ದಿವಾಕರ್ ಅವರು ಕರ್ನಾಟಕ ಕಾಂಗ್ರೆಸ್ ಸಮಿತಿಯ ಸದಸ್ಯರಾದ ಕೃಷ್ಣಮೂರ್ತಿ, ಸಿದ್ದಪ್ಪ ಇವರೆಲ್ಲರ ಪರಿಚಯವಾದದ್ದು ಸಕ್ರಿಯ ರಾಜಕಾರಣದಲ್ಲಿ ಧುಮುಕಲು ಸಹಕಾರಿಯಾಗಿತ್ತು.[6]

ಕಡಿದಾಳ್‌ರು ಕಾಂಗ್ರೆಸ್ ಪಕ್ಷದ ಸದಸ್ಯರಾದ ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯೊಂದೇ ಅಲ್ಲದೇ ಇತರ ರಾಜಕೀಯ ಪಕ್ಷಗಳೂ ಇದ್ದವು. ಆದರೆ ಯಾವುದಕ್ಕೂ ಭದ್ರನೆಲೆಯಿರಲಿಲ್ಲ. ಸರ್ಕಾರ ಅನುಸರಿಸುತ್ತಿದ್ದ ವಿಭಜಿಸಿ ಆಳುವ ನೀತಿ, ಇನ್ನೊಂದು ಕಡೆ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆ ಮೈಸೂರು ಕಾಂಗ್ರೆಸಿಗೆ ನೆರವು ನೀಡುತ್ತಿರಲಿಲ್ಲ. ಮೈಸೂರು ಕಾಂಗ್ರೆಸ್ ಸಂಸ್ಥೆಯ ಅಸ್ತಿತ್ವ ಉಳಿಯಬೇಕಾದರೆ ವಿರೋಧ ಪಕ್ಷಗಳಾಗಿದ್ದ ಪ್ರಜಾಪಕ್ಷಗಳನ್ನು ಮತ್ತು ಪ್ರಜಾಮಿತ್ರಮಂಡಳಿಯನ್ನು ಮೈಸೂರು ಕಾಂಗ್ರೆಸಿನಲ್ಲಿ ಸೇರಿಸುವುದು ಅಗತ್ಯವೆಂದು ಮೈಸೂರು ಕಾಂಗ್ರೆಸ್ ನಾಯಕರು ಭಾವಿಸಿದರು. ಇದಕ್ಕಾಗಿ ಮಹಾತ್ಮ ಗಾಂಧಿಯನ್ನು ಭೇಟಿ ಮಾಡಲು ವಾರ್ಧಾಕ್ಕೆ ಹೋಗಿ ಅವರ ಸಲಹೆ, ಆಶೀರ್ವಾದಗಳನ್ನು ಪಡೆದು ಮೈಸೂರು ಕಾಂಗ್ರೆಸ್‌ಗೆ ಅಖಿಲ ಭಾರತ ಕಾಂಗ್ರೆಸ್ ಬೆಂಬಲ ದೊರಕಿಸಿಕೊಡುವ ಭರವಸೆಯನ್ನು ಪಡೆದು ಹಿಂದುರುಗಿದರು. ಪ್ರಜಾಮಿತ್ರಮಂಡಳಿ, ಪ್ರಜಾಪಕ್ಷ ಮಂಡಳಿಯನ್ನು ರದ್ದು ಪಡಿಸಿ ಇದರಲ್ಲಿರುವ ಸದಸ್ಯರು ಕಾಂಗ್ರೆಸ್‌ಗೆ ಸೇರುವಂತೆ ಹಾಗೂ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆಸುವಂತೆ ತೀರ್ಮಾನ ಕೈಗೊಳ್ಳಲಾಯಿತು. ಈ ರೀತಿ ಮೈಸೂರು ಕಾಂಗ್ರೆಸ್‌ನ ಈ ಮಹತ್ವದ ಕಾರ್ಯದಲ್ಲಿ ಕಡಿದಾಳ್ ಪಾತ್ರ ಕೂಡ ಇತ್ತು. 1938ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ಕಾಂಗ್ರೆಸ್ ಪ್ರಮುಖರ ಹಾಗೂ ಪ್ರಜಾಪಕ್ಷದ ಬೃಹತ್ ಸಭೆ ಮದ್ದೂರು ತಾಲೂಕಿನ ಶಿವಪುರದಲ್ಲಿ ಸಮಾವೇಶಗೊಂಡಿತು. ಈ ಸಭೆಯಲ್ಲಿ ಕಡಿದಾಳು ಭಾಗವಹಿಸಿದರು. ಸಮಾವೇಶದಲ್ಲಿ ಮೂರು ದಿನಗಳ ಕಾಲ ಧ್ವಜ ಸತ್ಯಾಗ್ರಹ ನಡೆದು ಹಲವು ಮುಖಂಡರ ದಸ್ತಗಿರಿಯಾಯಿತು. ಆ ಅಧಿವೇಶನ ಮಹಾರಾಜರ ನೇತೃತ್ವದಲ್ಲಿ ಮೈಸೂರಿನಲ್ಲಿ ಜವಾಬ್ದಾರಿಯುತ ಸರ್ಕಾರದ ಸ್ಥಾಪನೆಗಾಗಿ ಮೈಸೂರು ಕಾಂಗ್ರೆಸ್ ಹೋರಾಟ ನಡೆಸಬೇಕೆಂದು ನಿರ್ಣಯವನ್ನು ಕೈಗೊಂಡಿತ್ತು. ಆಗ ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಮೈಸೂರು ಕಾಂಗ್ರೆಸ್ ಅಂಗ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ಕಡಿದಾಳ್‌ರು ಕೂಡ ಜವಾಬ್ದಾರಿ ಸರ್ಕಾರಕ್ಕೆ ಬೆಂಬಲ ಸೂಚಿಸಿದ್ದರು.[7] 1939ರಲ್ಲಿ ಮೈಸೂರು ಕಾಂಗ್ರೆಸ್ ಅರಣ್ಯ ಸತ್ಯಾಗ್ರಹವನ್ನು ಆರಂಭಿಸಿತು. ರಾಜ್ಯದ ಕೆಲವು ಕಾಂಗ್ರೆಸ್ ನಾಯಕರು ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ ಒಬ್ಬೊಬ್ಬರಾಗಿ ಸೆರೆಮನೆ ಸೇರುತ್ತಿದ್ದರು. ಸತ್ಯಾಗ್ರಹಿಗಳಿಗೆ ಸೆರೆಮನೆಯಲ್ಲಿ ಹಾಗೂ ಹೊರಗಡೆ ಪೊಲೀಸರು ಚಿತ್ರಹಿಂಸೆ ಕೊಡುತ್ತಿದ್ದರು. ಪೊಲೀಸರ ದುರ್ವರ್ತನೆ ಮತ್ತು ಸರ್ಕಾರದ ಕ್ರೂರ ದಬ್ಬಾಳಿಕೆ ವಿಚಾರದಲ್ಲಿ ಸೆರೆಮನೆಯ ಹೊರಗಡೆಯಿದ್ದ ಕಾಂಗ್ರೆಸ್ ಮುಖಂಡರು ಮಹಾತ್ಮ ಗಾಂಧೀಜಿಯವರಿಗೆ ದೂರನ್ನು ಸಲ್ಲಿಸಿದ್ದರು. ಗಾಂಧೀಜಿಯವರು ಸತ್ಯಾಂಶ ತಿಳಿದು ವರದಿ ಒಪ್ಪಿಸಲು ಗಾಂಧೀಜಿಯವರ ಆಪ್ತಕಾರ್ಯದರ್ಶಿಯಾದ ಮಹದೇವ ದೇಸಾಯಿಯವರನ್ನು ಕಳುಹಿಸಿದರು. ದೇಸಾಯಿಯವರು (1939) ಶಿವಮೊಗ್ಗಕ್ಕೆ ಬಂದಂತಹ ಸಮಯದಲ್ಲಿ ಕಡಿದಾಳು ಎಲ್ಲ ವಿಷಯಗಳನ್ನು ದೇಸಾಯಿಯವರಿಗೆ ತಿಳಿಸಿದರು. ಇದು ಕಡಿದಾಳ್ ಮತ್ತು ದೇಸಾಯಿಯವರ ಪ್ರಥಮ ಭೇಟಿಯಾಗಿದೆ.[8]

ಮೈಸೂರು ಕಾಂಗ್ರೆಸ್‌ನ ಆರ್ಥಿಕ ಸ್ಥಿತಿ ಅಷ್ಟೊಂದು ಉತ್ತಮವಿಲ್ಲದ ಸಂದರ್ಭದಲ್ಲಿ

ಅದರ ಅಧಿವೇಶನಕ್ಕೆ ಮಲೆನಾಡಿನ ಭಾಗದಲ್ಲಿ ಪ್ರವಾಸ ಮಾಡಿ ಹಣವನ್ನು ಸಂಗ್ರಹಿಸಿ ಮೈಸೂರು ಕಾಂಗ್ರೆಸ್‌ಗೆ ನೀಡಿದ್ದರು. ಮೈಸೂರು ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದ ನಂತರ ಕಾಂಗ್ರೆಸಿಗೆ ಸೇರಿದ್ದ ಶ್ರೀ ಎಸ್.ನಿಜಲಿಂಗಪ್ಪ ಮತ್ತು ಸಿವಿಲ್ ಲಿಬರ್ಟಿಸ್ ಯೂನಿಯನ್ ಅಧ್ಯಕ್ಷ ಎಸ್. ರಾಜು ಅವರು ಮೈಸೂರು ಕಾಂಗ್ರೆಸ್ ಮಹತ್ವ ತಿಳಿಸಲು ಅವರಿಬ್ಬರ ಭಾಷಣವನ್ನು ಏರ್ಪಡಿಸಲಾಗಿತ್ತು. ಶಿವಮೊಗ್ಗ ರಾಮಣ್ಣ ಶೆಟ್ಟಿ ಪಾರ್ಕಿನಲ್ಲಿ ಬಹಿರಂಗ ಸಭೆಯನ್ನು 1939ರಲ್ಲಿ ಏರ್ಪಡಿಸಿದ್ದರು. ಕಡಿದಾಳ್‌ರು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿದ್ದರಿಂದ ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ನಿಜಲಿಂಗಪ್ಪನವರ ಪರಿಚಯವಾಗಿ ಆಪ್ತರಾದರು. ನಂತರದ ದಿನಗಳಲ್ಲಿ ರಾಜಕಾರಣವೇ ಅವರ ಮುಖ್ಯ ಕಸುಬಾಯ್ತು. ವಕೀಲ ವೃತ್ತಿಯನ್ನು ಉಪಕಸುಬನ್ನಾಗಿ ಮಾಡಿಕೊಂಡರು. ಕಾಂಗ್ರೆಸ್‌ನ ಮೂಲಕವೇ ಉನ್ನತ ಹುದ್ದೆಗಳನ್ನು ಅಲಂಕರಿಸುವಂತಾಯಿತು.[9]

1941ರಲ್ಲಿ ಕಡಿದಾಳ್ ಮಂಜಪ್ಪನವರು ಶಿವಮೊಗ್ಗದ ಪ್ರಭಾವಿ ರಾಜಕಾರಣಿಯಾದ ಹೆಚ್. ಸಿದ್ಧಯ್ಯನವರ ಒತ್ತಾಯಕ್ಕೆ ಮಣಿದು ಪ್ರಜಾಪ್ರತಿನಿಧಿ ಸಭೆಗೆ ಕಾಂಗ್ರೆಸಿನಿಂದ ಚುನಾವಣೆಗೆ ನಿಂತರು. ತೀರ್ಥಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದರು. ಅಂದಿನ ಕಾಂಗ್ರೆಸ್ ಪಕ್ಷದ ಸದಸ್ಯರೆಂದರೆ ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ, ಡಿ.ದೇವರಾಜ ಅರಸು, ವಿ.ವೆಂಕಟಪ್ಪ ಮತ್ತು ಎಂ.ಎನ್.ಜೋಯಿಸ್, ಎಸ್. ಎಂ.ಎಸ್.ರಜ್ಜಿ, ಭೂಪಾಳಂ ಚಂದ್ರಶೇಖರಯ್ಯ, ರಾವಬಹದ್ದೂರ ರಾಮಸ್ವಾಮಿ ಮತ್ತು ಶ್ರೀಮತಿ ಸಾಕಮ್ಮ ಅವರು ಪ್ರಜಾಪಕ್ಷದ ಸದಸ್ಯರಾಗಿದ್ದರು. ಇವರೆಲ್ಲರೊಂದಿಗೆ ಕಡಿದಾಳ್‌ರು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಯೋಚಿಸಿದ್ದರು. 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸಿದರು. ಪ್ರಜಾಪ್ರತಿನಿಧಿ ಸಭೆ ನಡೆಯುವ ಸಂದರ್ಭದಲ್ಲಿ ಸಭೆಯಲ್ಲಿ ಸರ್ಕಾರದ ಧ್ಯೆಯ ಧೋರಣೆಗಳನ್ನು ತೀವ್ರವಾಗಿ ಖಂಡಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಆಡಳಿತದಲ್ಲಿರುವ ಭ್ರಷ್ಟಾಚಾರವನ್ನು ಹೋಗಲಾಡಿಸುವ ಸಲುವಾಗಿ ಮತ್ತು ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ನಿರ್ಣಯಗಳನ್ನು ಮಂಡಿಸಿದ್ದು ಆ ನಿರ್ಣಯಕ್ಕೆ ಪ್ರಧಾನ ಸ್ಥಾನ ಸಿಕ್ಕಿತ್ತು. ಭ್ರಷ್ಟಾಚಾರ, ಲಂಚಗುಳಿತನವನ್ನು ಪ್ರಾರಂಭದಿಂದಲೇ ವಿರೋಧಿಸುತ್ತಿದ್ದರು. ಇದರಿಂದ ಇವರ ರಾಜಕೀಯ ನಿಷ್ಠತೆಯನ್ನು ತಿಳಿಯಬಹುದು. ಪ್ರಜಾಪ್ರತಿನಿಧಿ ಸಭೆಯ ಅವಧಿ ಮುಗಿದ ನಂತರ ಶಿವಮೊಗ್ಗ ಜಿಲ್ಲೆಯಿಂದ ನ್ಯಾಯವಿಧಾಯಕ ಸಭೆಗೆ ಸ್ಪರ್ಧಿಸಿದರು. ಇದರಲ್ಲಿ ಅವಿರೋಧವಾಗಿ ಆಯ್ಕೆಯಾದರು. ನ್ಯಾಯ ವಿಧಾಯಕ ಸಭೆಯಲ್ಲೂ ಕೂಡ ಹಲವು ಮಹತ್ವದ ಮಸೂದೆಗಳನ್ನು ಮಂಡಿಸಿದ್ದರು. ವಿದ್ಯಾರ್ಥಿಗಳ ಆಯ್ಕೆ ಸಮಿತಿಯಲ್ಲಿ ರ್‍ಯಾಂಕ್ ವಿಜೇತರಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಮಂಡಿಸಿದರೂ ಕಾಂಗ್ರೆಸ್‌ನ ಕೆಲವು ಪ್ರಮುಖರು ಇದನ್ನು ಕಾರ್ಯರೂಪಕ್ಕೆ ತರಲು ಬಿಡುತ್ತಿರಲಿಲ್ಲ.

ಕಡಿದಾಳ್‌ರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದುಕೊಂಡು 1947 ಆಗಸ್ಟ್ 15ರಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದಾಗ ಕಡಿದಾಳ್ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ಒಂದು ಸಭೆಯನ್ನು ಏರ್ಪಡಿಸಿದ್ದು, ಅಧ್ಯಕ್ಷ ಭಾಷಣದಲ್ಲಿ ಭಾರತವು ಕೆಲವೇ ವರ್ಷಗಳಲ್ಲಿ ಸಂಪತ್ತು ಸಮೃದ್ಧಿಯಿಂದ ಕೂಡಿದ ರಾಷ್ಟ್ರವಾಗುತ್ತದೆ. ಗಾಂಧೀಜಿಯ ತತ್ವಗಳಿಂದ ಸ್ವಾತಂತ್ರ್ಯ ಪಡೆದಿದ್ದು, ಇಡೀ ಜಗತ್ತಿನಲ್ಲಿಯೇ ಮಾದರಿ ರಾಷ್ಟ್ರವಾಗುತ್ತದೆಂದು ಹೇಳಿದ್ದರು. ಆದರೆ ಕೊನೆಯ ಕಾಲದಲ್ಲಿ ತಾನು ಕಂಡ ಕನಸು ನನಸಾಗಲಿಲ್ಲ. ಭಾರತೀಯರು ಅಪ್ರಾಮಾಣಿಕರೂ, ಕ್ರೂರಿಗಳು, ಸ್ವಾರ್ಥ ಸಾಧಕರೂ" ಎಂದು ವ್ಯಥೆಪಟ್ಟಿದ್ದರು ಮುಂದೆ ನ್ಯಾಯವಿಧೇಯಕ ಸಭೆಯಲ್ಲಿ ಇದ್ದು ಕೊಂಡೇ ಗೇಣಿದಾರರ ಪರವಾಗಿ ಒಂದು ನಿರ್ಣಯವನ್ನು ಕಡಿದಾಳ್‌ರು

ಕೈಗೊಂಡರು. ಹುಟ್ಟಿನಿಂದಲೇ ಗೇಣಿದಾರರ ಕುಟುಂಬದಿಂದ ಬಂದ ಕಡಿದಾಳು ಗೇಣಿದಾರರ ಸಂಘವನ್ನು ಸ್ಥಾಪಿಸುತ್ತಾರೆ. ಮಲೆನಾಡ ಭಾಗದಲ್ಲಿ ಮೊದಲ ಬಾರಿಗೆ ಗೇಣಿದಾರರನ್ನು ಸಂಘಟಿಸಿದವರು ಹಾಗೂ ಗೇಣಿದಾರರಿಗೆ ತಮ್ಮ ಹಕ್ಕು ಸ್ವಾತಂತ್ರ್ಯದ ಬಗ್ಗೆ ತಿಳಿಸಿಕೊಟ್ಟರು. ಹಾಗೆಯೇ ಸಾಗರದಲ್ಲಿ 'ರೈತ ಸಂಘ'ವನ್ನು ಸ್ಥಾಪಿಸಲಾಗಿದ್ದು ಇದು ಮುಂದೆ ಸ್ವಾತಂತ್ರ್ಯದ ನಂತರದ ಭೂಹೋರಾಟಕ್ಕೆ ನಾಂದಿಯಾಗಿ, ಕರ್ನಾಟಕದಲ್ಲಿ ಭೂಸುಧಾರಣೆಯನ್ನು ತರಲು ಸಹಕಾರಿಯಾಯಿತು ಕಡಿದಾಳ್‌ರು ಭೂಸಮಸ್ಯೆಯನ್ನು ಕುರಿತಂತೆ ನಿರ್ಣಯ ತೆಗೆದುಕೊಂಡಿರುವುದು ಒಂದು ಮಹತ್ವದ ವಿಚಾರವಾಗಿದೆ.[10] ಏಕೆಂದರೆ ಈ ಸುಧಾರಣೆ ತಂದ ಸಮಯದಲ್ಲಿ ಅಲ್ಲಿ ಕಾಂಗ್ರೆಸಿಗರೆಲ್ಲ ಭೂಮಾಲೀಕರೇ ಆಗಿದ್ದರು. ಅವರೆಲ್ಲರೂ ತಮ್ಮ ಸ್ವಾರ್ಥಪರವಾಗಿ ಚಿಂತಿಸುತ್ತಿದ್ದರು. ಆದರೆ ಕಡಿದಾಳ್ ಮಂಜಪ್ಪನವರು ಕಾಂಗ್ರೆಸ್ ಪಕ್ಷದ ಮೂಲಕ ರಾಜಕೀಯ ರಂಗಕ್ಕೆ ಇಳಿದಿದ್ದು ತನ್ನ ಸಮಾಜದ ಹಿತಕ್ಕಾಗಿ ಹಾಗೂ ರೈತರ ಕಷ್ಟ, ಸುಖಗಳಲ್ಲಿ ಎಲ್ಲದರಲ್ಲಿ ಭಾಗಿಯಾಗುವುದು ಮುಖ್ಯ ಉದ್ದೇಶವಾಗಿತ್ತು. ಹಾಗೂ ಭೂಮಾಲೀಕರ ದೌರ್ಜನ್ಯದಿಂದ ಅತಂತ್ರವಾಗಿದ್ದ ರೈತರ ಸಂಘಟನೆಯಲ್ಲಿ ತೊಡಗಿ ಸರ್ಕಾರದ ಮೂಲಕ ನ್ಯಾಯ ದೊರಕಿಸಿ ಕೊಡುವುದೇ ಅವರ ಮುಖ್ಯ ಉದ್ದೇಶವಾಗಿತ್ತು.

**ಉಪಸಂಹಾರ:**

ಸಮಾಜ ಸುಧಾರಣೆ ಕೇವಲ ಬಡವರ ಉದ್ಧಾರದಿಂದಾಗಲಿ, ರಾಜಕಾರಣಗಳಿಂದಾಗಲಿ, ಸಮಾಜ ಸುಧಾರಣೆಗಳಿಂದಾಗಲಿ ಆಗದು, ಇದಕ್ಕೆ ಜನತೆಯ ಸಹಕಾರ ಬೇಕು. ಸರಕಾರ ಮಾಡಿದ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಜನತೆಯ ಪ್ರಾಮಾಣಿಕವಾದ ಸಹಕಾರ ಬೇಕು. ದೇಶದ ಜನತೆಯ ಏಳಿಗೆಗಾಗಿ ದುಡಿಯುವ ರಾಜಕಾರಣಿಗಳು ಹುಟ್ಟಿ ಬರಬೇಕೆಂದು ಜೀವಿತದ ಕೊನೆಯ ಗಳಿಗೆಯಲ್ಲಿ ಹೇಳುತ್ತಿದ್ದರು. ರಾಜಕಾರಣಿಗಳು ಪ್ರಾಮಾಣಿಕರಾಗಿರಬೇಕು, ನೀತಿವಂತರಾಗಿರಬೇಕು. ಅಂದಾಗ ಜನ ಅವರನ್ನು ಮುಖಂಡರೆಂದು ಭಾವಿಸುವರು ಅಂಥ ಮುಖಂಡರಿಂದ ಸಮಾಜದ ಏಳ್ಗೆ ಆಗುವುದು ಎನ್ನುತ್ತಿದ್ದರು. ಎಲ್ಲಿಯವರೆಗೆ ರಾಜಕಾರಣದಲ್ಲಿ ಭ್ರಷ್ಟರ ಕೈವಾಡ ಹೆಚ್ಚಾಗಿರುತ್ತದೆಯೋ ಅಲ್ಲಿಯವರೆಗೆ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಸುಧಾರಣೆ ಮತ್ತು ಪ್ರಗತಿ ಸಾಧ್ಯವಿಲ್ಲ ಎಂದು ಕಡಿದಾಳು ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಸಮಾಜ ಸುಧಾರಣೆ ಆಗಬೇಕಾದರೆ ಜನ ನೆಮ್ಮದಿಯಿಂದ ಬದುಕಬೇಕಾದರೆ ಮೇಲಿನಿಂದ ಸುಧಾರಣೆ ಆಗಬೇಕು ಇಲ್ಲವೆ ಕೆಳಗಡೆಯಿಂದ ಕ್ರಾಂತಿ ಆಗಬೇಕು ಎನ್ನುತ್ತಿದ್ದರು.

ಈ ನಿಟ್ಟಿನಲ್ಲಿ ಕಡಿದಾಳ್‌ರು ರಾಷ್ಟ್ರೀಯ ಜಾಗೃತಿ ಮಂಡಲಿ ಸ್ಥಾಪಿಸಿರುವುದು ಸಮಂಜಸವೆನಿಸುತ್ತದೆ. ಈ ತರಹದ ನಿಷ್ಟುರ ಅಂಶಗಳನ್ನು ಕಡಿದಾಳ್‌ರು ಅಳವಡಿಸಿಕೊಂಡು ಕಾಂಗ್ರೆಸ್ ಪಕ್ಷದಲ್ಲಿದ್ದು ಸಮಾಜವಾದಿ ತತ್ವಗಳ ಮೂಲಕ ಕರ್ನಾಟಕದಲ್ಲಿ ಭೂ ಸುಧಾರಣೆಗೆ ಅಡಿಪಾಯ ಹಾಕಿ ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವುದು ಮಹತ್ವದೆನಿಸುತ್ತದೆ.

**ಕೊನೆ ಟಿಪ್ಪಣಿಗಳು:**


1. ಪುಟ್ಟಣ್ಣ ವೈ.ಎಸ್., ನಾನು ಕಂಡ ಮಲೆನಾಡು, ಪ್ರಕಾಶಕರು ಶ್ರೀ ಕೆ.ಎಂ.ದಿನೇಶ್, ಬೆಂಗಳೂರು, 1994, ಪು ಸಂ 122.
2. ಬಸವರಾಜ, ಶಿವಮೊಗ್ಗ ರೈತ ಚಳುವಳಿ, ಸಮುದಾಯ ಪ್ರಕಾಶನ, ಬೆಂಗಳೂರು, 1981, ಪು ಸಂ 174
3. ಬಿಳುಮನೆ ರಾಮದಾಸ್, ಭೂಸುಧಾರಣಾ ರೂವಾರಿ ಕಡಿದಾಳ್ ಮಂಜಪ್ಪ, ಪ್ರಕಟಣೆ, ಕಡಿದಾಳ್ ಮಂಜಪ್ಪನವರ ಜನ್ಮಶತಮಾನೋತ್ಸವ, ಸಮಿತಿ, ಬೆಂಗಳೂರು, 2007, ಪು ಸಂ 241
4. ಬೋರಲಿಂಗಯ್ಯ ಹಿ.ಚಿ., ಹುಚ್ಚಪ್ಪ ಮಾಸ್ತರ ಎನ್.(ಸಂ), ಕಾಗೋಡು ಚಳುವಳಿ, ಸುವರ್ಣ ಸಂಪುಟ, ಮಲೆನಾಡು ಜನಪದ ಲೋಕ, ಸಾಗರ, 2002, ಪು ಸಂ 165.
5. ಜನಹೋರಾಟ ದಿನಪತ್ರಿಕೆ, (22.12.2001).
6. ಮುಝಫರ್ ಅಸ್ಸಾದಿ, ಭಾರತ ಮತ್ತು ಕರ್ನಾಟಕದಲ್ಲಿ ರೈತ ಹೋರಾಟಗಳು, ಅರಿವು ಬರಹ, ಸಂಚಿಕೆ (14, 1998). , ಪು ಸಂ 34
7. ರಾಜನ್ ಎಂ.ಎ.ಎಸ್., ಕರ್ನಾಟಕದಲ್ಲಿ ಭೂಸುಧಾರಣೆ ನಾನು ಸಹ ಹತ್ತಿರದಿಂದ ಕಂಡೆ, ಡಿ.ವಿ.ಎಸ್. ಪ್ರಕಾಶನ, ಗಾಂಧಿನಗರ, ಬೆಂಗಳೂರು, 1987, , ಪು ಸಂ 196.
8. ರಾಜಶೇಖರ್ ಜಿ., ಕಾಗೋಡು, ಸತ್ಯಾಗ್ರಹ, ಲಕ್ಷ್ವರ ಪ್ರಕಾಶನ, ಹೆಗ್ಗೋಡು, 1980. , ಪು ಸಂ 179.
9. ಲಕ್ಷ್ಮಣ್ ತೆಲಗಾವಿ (ಸಂ), ಚರಿತ್ರೆ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005, , ಪು ಸಂ 134.
10. ವಿಷ್ಣುಮೂರ್ತಿ ಹೆಚ್.ಸಿ.(ಸಂ), ಗೋಪಾಲಗೌಡ ಶಾಂತವೇರಿ, ಅಂತರಂಗ ಬಹಿರಂಗ, ಅನನ್ಯ ಪ್ರಕಾಶನ, ಧಾರವಾಡ, 1999. , ಪು ಸಂ 141.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.